**AKSHARASURYA** Peer-Reviewed Multi Lingual Journal

Volume – 01, Issue – 01, October 2022.

# ‘ಸಮಾಜವಾದ’ ಕುರಿತ ಅಂಬೇಡ್ಕರ್ ಅವರ ವಿಚಾರಗಳು: ಒಂದು ಅವಲೋಕನ

**ಗಂಗಾಧರ ಬಿ. ಎಂ.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ

ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾನಿಲಯ.

**ಪ್ರವೇಶಿಕೆ:** ಸ್ಥಗಿತಗೊಂಡಿದ್ದ ಭಾರತೀಯ ಸಮಾಜದ ಚಲನಶೀಲತೆಗೆ ಶ್ರಮಿಸಿದ ಮಹನೀಯರ ಪಟ್ಟಿಯಲ್ಲಿ ಅಂಬೇಡ್ಕರ್ ಅವರದು ಮುಂಚೂಣಿ ಹೆಸರು. ಇಪ್ಪತ್ತೊಂದನೆಯ ಶತಮಾನದಲ್ಲೂ ತಮ್ಮ ಪ್ರಖರ ಚಿಂತನೆಗಳಿಂದ ಪ್ರಸ್ತುತರಾಗಿರುವುದು ಅವರ ಹೆಗ್ಗಳಿಕೆ. ವ್ಯಾಪಕವಾದ ಓದು ಮತ್ತು ಅಸ್ಪೃಶ್ಯತೆಯ ಅವಮಾನಗಳಿಂದ ಹರಳುಗಟ್ಟಿದ ವ್ಯಕ್ತಿತ್ವ ಅವರದು. ಇದರಿಂದ ಮೂಡಿದ ಅವರ ಕ್ರಾಂತಿಕಾರಿ ನಿಲುವಿನ ವಿಚಾರಗಳ ಅನುಷ್ಠಾನ, ಭಾರತೀಯ ಸಮಾಜಕ್ಕೆ ಇನ್ನೂ ಆಗಬೇಕಾಗಿರುವ ಒಂದು ದೊಡ್ಡ ಶಸ್ತ್ರಚಿಕಿತ್ಸೆ.

ಸ್ವಾತಂತ್ರ್ಯಪೂರ್ವದಲ್ಲಿಯೇ ದಲಿತ ಜನಾಂಗಗಳ ಸಂಘಟನೆ, ಶಿಕ್ಷಣ ಮತ್ತು ಹೋರಾಟಗಳಿಗೆ ದೊಡ್ಡ ಹಾದಿ ನಿರ್ಮಿಸಿಕೊಟ್ಟ ಹೆಗ್ಗಳಿಕೆ ಅಂಬೇಡ್ಕರ್ ಅವರದು. ಸಂವಿಧಾನ ರಚನೆಯ ಕರಡು ಸಮಿತಿ ಅಧ್ಯಕ್ಷರಾಗಿ ಮತ್ತು ದೇಶದ ಮೊದಲ ಕಾನೂನು ಮಂತ್ರಿಯಾಗಿ ಅವರ ಕೊಡುಗೆಗಳು ಅಪಾರ. ಅವರ ಸೂಕ್ಷ್ಮದೃಷ್ಟಿಯ ಧೋರಣೆಯ ಫಲವನ್ನು ಭಾರತೀಯ ಸಮಾಜದ ಹಿಂದುಳಿದ ಜಾತಿ ಜನಾಂಗಳು ಇಂದಿಗೂ ಅನುಭವಿಸುತ್ತಿವೆ. ಉದ್ಯೋಗ, ಶಿಕ್ಷಣ ಮತ್ತು ರಾಜಕೀಯಗಳಲ್ಲಿನ ಮೀಸಲಾತಿಗಳು ಮತ್ತು ಇತರೆ ಕಲ್ಯಾಣ ಕಾರ್ಯಕ್ರಮಗಳಿಗೆ ಶ್ರೀಕಾರ ಹಾಕಿದವರು ಅಂಬೇಡ್ಕರ್ ಅವರೇ.

ಭಾರತದಲ್ಲಿ ಸಮಾಜ ಕುರಿತು, ಅದರ ವಿವಿಧ ಆಯಾಮಗಳನ್ನು ಕುರಿತು ಆಳವಾಗಿ ಚಿಂತಿಸಿರುವ ಕೆಲವೇ ಮಹನೀಯರಲ್ಲಿ ಅಂಬೇಡ್ಕರ್ ಒಬ್ಬರು. ಅವರ ವಿಚಾರಗಳು ಯಾವತ್ತೂ ಆಧಾರ ಸಹಿತವಾಗಿದ್ದವು. ತರ್ಕಕ್ಕೆ ಬದ್ಧವಾಗಿದ್ದವು. ಖಚಿತ ವಿಚಾರ ಸರಣಿಗೆ ಅಂಬೇಡ್ಕರ್ ಅವರ ವಿಚಾರ ಸಾಹಿತ್ಯ ಒಂದು ಸಾರ್ವಕಾಲೀಕ ಮಾದರಿ. ಅವರು ವಿವಿಧ ಸಂದರ್ಭಗಳಲ್ಲಿ ಭಾರತೀಯ ಸಮಾಜ ಮತ್ತು ಅದರ ಸಾಂಸ್ಕೃತಿಕ ಆಯಾಮಗಳನ್ನು ವಿಶ್ಲೇಷಿಸಿದ್ದಾರೆ. ಸ್ವತಃ ಅರ್ಥಶಾಸ್ತ್ರಜ್ಞರಾಗಿ ಭಾರತದ ಆರ್ಥಿಕ ಜೀವನವನ್ನು ಕುರಿತು ಆಳವಾಗಿ ಚಿಂತಿಸಿದ್ದಾರೆ. ಅವರ ಸಂಶೋಧನೆಯ ಪ್ರವೃತ್ತಿಯು ಭಾರತದ ವೇದ, ಪುರಾಣಗಳಿಂದ ಮೊದಲುಗೊಂಡು ಪಾಶ್ಚಾತ್ಯ ಚಿಂತಕರ ಅಭಿಪ್ರಾಯಗಳವರೆಗೆ ವಿಸ್ತರಿಸಿದೆ.

ಅವರ ಹೋರಾಟ ಮತ್ತು ಸಂವಿಧಾನಾತ್ಮಕ ಸುಧಾರಣಾ ಉಪಕ್ರಮಗಳಿಗೆ ಕಾರಣವಾದ ಚಿಂತನೆಗಳ ಅವಲೋಕನ ಯಾವತ್ತೂ ಪ್ರಯೋಜನಕಾರಿ. ಇದನ್ನು ‘ಅಂಬೇಡ್ಕರ್ ಅವರ ಸಮಾಜವಾದ’ ಎಂಬ ಶೀರ್ಷಿಕೆಯಡಿ ಚರ್ಚಿಸುವುದು ಅವರ ಸೈದ್ಧಾಂತಿಕ ನಿಲುವುಗಳನ್ನು ಅರಿಯುವ ಒಂದು ಉಪಕ್ರಮವಷ್ಟೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರ ಸಮಾಜವಾದಿ ಚಿಂತನೆಗಳ ಸ್ವರೂಪವನ್ನು ಐದು ಸಂದರ್ಭಗಳಲ್ಲಿ ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

1. ಭಾರತೀಯ ಸಮಾಜದ ವಿಶ್ಲೇಷಣೆಯ ಸಂದರ್ಭ
2. ಗಾಂಧೀವಾದದ ವಿಮರ್ಶೆ
3. ಕಾರ್ಲ್‌ಮಾರ್ಕ್ಸ್ ಅವರ ಕಮ್ಯುನಿಸಂನ ವಿಮರ್ಶೆ
4. ಬುದ್ಧನ ಸಮಾಜವಾದದ ವಿವೇಚನೆಯ ಸಮಯದಲ್ಲಿ
5. ಸಂವಿಧಾನ ರಚನೆಯ ಮೂಲಕ

**ಭಾರತೀಯ ಸಮಾಜದ ವಿಶ್ಲೇಷಣೆಯ ಸಂದರ್ಭ:** ಭಾರತೀಯ ಸಮಾಜ ಜಾತಿಗಳ ಕಬಂಧ ಬಾಹುಗಳಿಂದ ಆವೃತವಾಗಿದೆ. ಇದೊಂದು ಮುಚ್ಚಿದ ವ್ಯವಸ್ಥೆ. ಇದು ಸೂಕ್ಷ್ಮದೃಷ್ಟಿಗೆ ಮಾತ್ರ ಸಿಲುಕುವ ವಿದ್ಯಮಾನ. ಇದರಿಂದ ಅನೇಕ ಅಮಾನವೀಯ

ಕ್ರಮಗಳು ಆಚರಣೆಯಲ್ಲಿವೆ. ಹಾಗಾಗಿ ಜಾತಿಪದ್ಧತಿಯ ವಿನಾಶ ಮಾಡಲು ಅಂತರ್ಜಾತಿ ವಿವಾಹಗಳಿಗೆ ಕೊಡಬೇಕಾದ ಮನ್ನಣೆ ಅಗತ್ಯವಿದೆ ಎಂದು ಬಾಬಾ ಸಾಹೇಬರು 'ಜಾತಿವಿನಾಶ' ಎಂಬ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ. 'ಜಾತಿಯಿಂದ ಆರ್ಥಿಕ ಕಾರ್ಯಸಾಮರ್ಥ್ಯ ಉತ್ತಮವಾಗುವುದಿಲ್ಲ. ಜಾತಿ ಜನಾಂಗವನ್ನು ಉತ್ತಮಗೊಳಿಸಿಲ್ಲ, ಉತ್ತಮಗೊಳಿಸಲು ಅದಕ್ಕೆ ಸಾಧ್ಯವೂ ಇಲ್ಲ. ಆದರೆ ಅದು ಒಂದನ್ನು ಮಾತ್ರ ಸಾಧಿಸಿದೆ. ಜಾತಿಯು ಹಿಂದುಗಳನ್ನು ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿ ನೀತಿಗೆಡಿಸಿದೆ.'[1] ಎಂಬುದು ಅವರ ಸ್ಪಷ್ಟ ನುಡಿ. ಜಾತಿ ಅನ್ಯಾಯಗಳ ಕುರಿತ ವಿಚಾರಗಳು ಬಂದಾಗ ರಾಮಮನೋಹರ ಲೋಹಿಯಾ ಅವರ ವಿಚಾರಗಳು ಸಹ ಸಮೀಪವೆನಿಸುತ್ತವೆ.

'ಭಾರತದಲ್ಲಿ ಸಣ್ಣ ಹಿಡುವಳಿಗಳು ಮತ್ತು ಅವುಗಳ ಪರಿಹಾರಗಳು' ಎಂಬ ಲೇಖನದಲ್ಲಿ ಭಾರತವು ಕೃಷಿ ಪ್ರಧಾನ ರಾಷ್ಟ್ರ ಮತ್ತು ಇಲ್ಲಿನ ಹಿಡುವಳಿಗಳು ಬಹಳ ಸಣ್ಣವು ಎಂದು ಗುರುತಿಸುತ್ತಾರೆ. ಅದಕ್ಕೆ ಪರಿಹಾರವಾಗಿ ಚದುರಿ ಹೋದ ಸಣ್ಣ ಹಿಡುವಳಿಗಳನ್ನು ಬೃಹತ್ ಹಿಡುವಳಿ ರಚನೆ ಮಾಡುವಂತೆ ಮಾರ್ಗದರ್ಶನ ನೀಡುತ್ತಾರೆ. ಭೂಮಿಯು ಮತ್ತೆ ಭಾಗವಾಗಿ ಕಿರಿದಾಗದಂತೆ ಸೂಚಿಸುತ್ತಾರೆ. ಇದು ಒಂದು ರೀತಿಯಲ್ಲಿ ಸಹಕಾರಿ ಕೃಷಿಯನ್ನು ಪ್ರೇರೇಪಿಸುವ ಸಂಗತಿಯಾಗಿದೆ.

ಹೆಚ್.ದಂಡಪ್ಪನವರು 'ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳು' ಎಂಬ ತಮ್ಮ ಸಂಪಾದಿತ ಕೃತಿಯ ಪ್ರಸ್ತಾವನೆಯ ಕೊನೆಯಲ್ಲಿ ಅಂಬೇಡ್ಕರ್ ಅವರ ಪ್ರಮುಖ ಚಿಂತನೆಗಳನ್ನು ಹನ್ನೊಂದು ಅಂಶಗಳ ಪಟ್ಟಿ ಮಾಡಿದ್ದಾರೆ. ಅದರಲ್ಲಿ ಆರು ಅಂಶಗಳು ಅಂಬೇಡ್ಕರ್ ಅವರ ಸಮಾಜವಾದಿ ಧೋರಣೆಯನ್ನು ಧ್ವನಿಸುವುದನ್ನು ಕಾಣುತ್ತೇವೆ. ಅವುಗಳೆಂದರೆ, '1. ಜಾತ್ಯತೀತ ಸಮಾಜ ಆ ಮೂಲಕ ಸಮಾನತೆ ಸೌಹಾರ್ದತೆ ಮತ್ತು ಭ್ರಾತೃತ್ವದ ಸಮಾಜ ಸ್ಥಾಪನೆ. 2. ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕು. 3. ಆರ್ಥಿಕ ಮತ್ತು ಸಾಮಾಜಿಕ ನ್ಯಾಯವಿಲ್ಲದಿದ್ದರೆ ಬರಿಯ ರಾಜಕೀಯ ಸ್ವಾತಂತ್ರ್ಯದಿಂದ ಸಾಮಾಜಿಕ ಏಕತೆಯನ್ನೇ ಆಗಲಿ, ರಾಷ್ಟ್ರದ ಸಮಗ್ರತೆಯನ್ನೇ ಆಗಲಿ ಉಳಿಸಿಕೊಳ್ಳಲು ಸಾಧ್ಯವಿಲ್ಲ. 4. ಶ್ರೇಣೀಕೃತ ಜಾತಿ ವ್ಯವಸ್ಥೆ ತರದಿದ್ದರೆ ಸಾಮಾಜಿಕ ಮತ್ತು ರಾಷ್ಟ್ರೀಯ ಸಮಗ್ರತೆ ಸಾಧ್ಯವಾಗುವುದಿಲ್ಲ 5. ವ್ಯಕ್ತಿ ಗೌರವ ಮತ್ತು ಸ್ವಾತಂತ್ರ್ಯಗಳು ಮುಖ್ಯ. 6. ಮೂಲಭೂತ ಹಕ್ಕುಗಳ ಪ್ರತಿಪಾದನೆ ಮತ್ತು 'ಒಬ್ಬ ಮನುಷ್ಯ ಒಂದು ಮೌಲ್ಯ', 'ಒಬ್ಬ ಮನುಷ್ಯ ಒಂದು ಮತ' ಎಂಬ ತತ್ವವನ್ನು ಸಂವಿಧಾನದಲ್ಲಿ ಸೇರಿಸಿದ್ದು.' ಇವು ಅವರ ಸಮಾಜವಾದಿ ಧೋರಣೆಗೆ ಪ್ರತಿಬಿಂಬವಾಗಿವೆ. ಆಧಾರ ಸಹಿತವಾದ ವಿಚಾರ ಮಂಡನೆ ಅಂಬೇಡ್ಕರ್ ಅವರ ಪಾಂಡಿತ್ಯದ ಪ್ರಮುಖ ಲಕ್ಷಣ. ಆಧಾರಗಳನ್ನು ವಿಶ್ಲೇಷಣೆ ಮಾಡಿ ಒಂದು ನಿರ್ಧಾರಕ್ಕೆ ಬಂದು, ತಮ್ಮ ಒಲವು ನಿಲುವುಗಳನ್ನು ಪ್ರಕಟಿಸಿರುವುದು ಸಾಮಾನ್ಯವಾಗಿ ಕಾಣುತ್ತೇವೆ.

ಭಾರತೀಯ ಸಮಾಜವಾದಿಗಳ ಕುರಿತು ಬಾಬಾ ಸಾಹೇಬರ ಅಭಿಪ್ರಾಯಗಳು ಇಂತಿವೆ. "ಭಾರತೀಯ ಸಮಾಜವಾದಿಗಳು ಇತಿಹಾಸವನ್ನು ಆರ್ಥಿಕ ದೃಷ್ಟಿಯಿಂದಲೇ ವಿವರಿಸುತ್ತಾರೆ. ಇದಕ್ಕೆ ಪ್ರತಿಯಾಗಿಯೂ ವಾದಿಸಬಹುದು. ಆಸ್ತಿ ಸರ್ವರಿಗೂ ಸಮಪಾಲು ಆಗಿರುವಂತೆ ಮಾಡುವುದು ನಿಜವಾದ ಏಕೈಕ ಸುಧಾರಣೆ ಎಂದು, ಉಳಿದವುಕ್ಕಿಂತಲೂ ಮುಂಚೆ ಅದನ್ನು ಸಾಧಿಸಲೇಬೇಕು ಎಂದು ಹೇಳುವ ಸಮಾಜವಾದಿಗಳ ವಾದಕ್ಕೆ ಇತಿಹಾಸದ ಆರ್ಥಿಕ ವಿವರಣೆ ಅವಶ್ಯಕವಾಗಿಲ್ಲ. ಆದರೆ ಸಮಾಜವಾದಿಗಳಿಗೆ ನಾನು ಹೀಗೆ ಕೇಳಬಯಸುತ್ತೇನೆ; ಸಾಮಾಜಿಕ ವ್ಯವಸ್ಥೆಯಲ್ಲಿ ಸುಧಾರಣೆ ಮಾಡದೆ ನೀವು ಆರ್ಥಿಕ ಸುಧಾರಣೆಯನ್ನು ಸಾಧಿಸಬಲ್ಲಿರಾ? ಭಾರತೀಯ ಸಮಾಜವಾದಿಗಳಿಗೆ ಈ ಪ್ರಶ್ನೆ ಹೊಳೆದಂತೆ ತೋರುವುದಿಲ್ಲ. ಭಾರತದಲ್ಲಿ ಶ್ರಮಜೀವಿಗಳೆಲ್ಲರೂ ಈ ಕ್ರಾಂತಿಗಾಗಿ ಒಗ್ಗೂಡುವರೆ? ಇಂತಹ ಒಂದು ಮಹತ್ಕಾರ್ಯಕ್ಕೆ ಇರುವ ಪ್ರೇರಣೆ ಯಾವುದು? ಇಂತಹದೊಂದು ಕಾರ್ಯಕ್ರಮವೊಂದರಲ್ಲಿ ಮುಂದೆ ಬಂದವರಲ್ಲಿ ಸಮಾನತೆ, ಭ್ರಾತೃತ್ವ ಭಾವ ಮತ್ತು ಎಲ್ಲಕ್ಕೂ ಪ್ರಧಾನವಾಗಿ ನ್ಯಾಯ ಬುದ್ಧಿ ನಿಶ್ಚಿತವಾಗಿ ಉಂಟು ಎಂದು ನಂಬಿಕೆಯಿದ್ದಾಗಲೇ ಮನುಷ್ಯನು ಕಾರ್ಯಕ್ಕೆ ತೊಡಗುತ್ತಾನೆ. ಕ್ರಾಂತಿ ಸಫಲವಾದ ಮೇಲೆ ನಮ್ಮೆಲ್ಲರನ್ನು ಸಮನಾಗಿ ನಡೆಸಿಕೊಳ್ಳುವರೆಂದು ಜಾತಿಮತಗಳ ಭೇದಭಾವ ಇರುವುದಿಲ್ಲವೆಂದು, ಭರವಸೆ ಇಲ್ಲದೆ ಹೋದರೆ

ಜನರು ಕ್ರಾಂತಿಕಾರ್ಯಕ್ಕೆ ಸೇರಲಾರರು."[2] ಇವು ಭಾರತದಲ್ಲಿ ಸಮಾಜವಾದಿಗಳ ಕಾರ್ಯಕ್ರಮ ಕುರಿತು ಅಂಬೇಡ್ಕರರ ಸೂಕ್ಷ್ಮ ವಿಮರ್ಶೆಯಾಗಿವೆ.

ಸಮಾಜವಾದದ ತರ್ಕಬದ್ದ ವಿಶ್ಲೇಷಣೆಗೆ ಇನ್ನೊಂದು ಉಲ್ಲೇಖವನ್ನು ಗಮನಿಸೋಣ. "ಈಗ ನಾನು ಸಮಾಜವಾದಿಗಳ ವಿಷಯಕ್ಕೆ ಬರುತ್ತೇನೆ. ಸಾಮಾಜಿಕ ವ್ಯವಸ್ಥೆಯಿಂದ ಉತ್ಪನ್ನವಾದ ಸಮಸ್ಯೆಯನ್ನು ಸಮಾಜವಾದಿಗಳು ಉಪೇಕ್ಷಿಸಬಲ್ಲರೇ? ಭಾರತೀಯ ಸಮಾಜವಾದಿಗಳು ಯುರೋಪಿನಲ್ಲಿ ತಮ್ಮ ವೈಚಾರಿಕ ಬಾಂಧವರನ್ನು ಅನುಕರಿಸುತ್ತಾರೆ. ಭಾರತದಲ್ಲಿರುವ ವಸ್ತುಸ್ಥಿತಿಯನ್ನು ಅರಿತುಕೊಳ್ಳದೆ ಇತಿಹಾಸವನ್ನು ಆರ್ಥಿಕ ದೃಷ್ಟಿಯಿಂದ ಅರ್ಥೈಸಲು ಹೆಣಗುತ್ತಾರೆ. ಮನುಷ್ಯ ಆರ್ಥಿಕ ಜೀವಿ. ಅವನ ಆಶೋತ್ತರಗಳು ಕೆಲಸ ಕಾರ್ಯಗಳು ಆರ್ಥಿಕ ವಾಸ್ತವವನ್ನು ಅವಲಂಬಿಸಿರುತ್ತದೆ. ಶಕ್ತಿಯ ಏಕಮೇವ ಮೂಲವೆಂದರೆ ಆಸ್ತಿ. ಇದು ಅವರ ವಾದ. ಆದ್ದರಿಂದ ಅವರು ಹೇಳುವುದೇನೆಂದರೆ ರಾಜಕೀಯ ಹಾಗೂ ಸಾಮಾಜಿಕ ಸುಧಾರಣೆಗಳು ಅದ್ಭುತವಾದ ಭ್ರಾಂತಿಗಳು. ಇತರ ಯಾವುದೇ ಸುಧಾರಣೆಗೆ ಮುನ್ನ ಆಸ್ತಿಯನ್ನು ಸರ್ವರಲ್ಲಿ ಹಂಚಿ ಆರ್ಥಿಕ ಸುಧಾರಣೆ ಮಾಡುವುದು ಅತ್ಯವಶ್ಯ. ಸಮಾಜವಾದಿಗಳ ಈ ವಾದದ ಪ್ರತಿಯೊಂದು ಅಂಶವನ್ನೂ ಅದರ ಆಧಾರವನ್ನು ಪ್ರಶ್ನಿಸಬೇಕಾಗುತ್ತದೆ. ಮನುಷ್ಯನ ಚಟುವಟಿಕೆಗಳಿಂದ ಆರ್ಥಿಕ ಉದ್ದೇಶ ಒಂದೇ ಪ್ರೇರಕ ಎಂಬುದನ್ನು ನಾವು ಅಂಗೀಕರಿಸಲಾಗುವುದಿಲ್ಲ."[3] ಇಲ್ಲಿನ ಉಲ್ಲೇಖಿತ ಮಾತುಗಳಲ್ಲಿ ಭಾರತದಲ್ಲಿ ಸಮಾಜವಾದದ ಅಳವಡಿಕೆಯ ನೈಜ ಸವಾಲುಗಳ ಕಡೆಗೆ ಗಮನ ಹರಿಸಿದ್ದಾರೆ. ಮಾತಿನಷ್ಟೆ ಕೃತಿಗೂ ಗಮನ ನೀಡಿರುವುದು ಇಲ್ಲಿನ ವಿಶೇಷ.

ಮುಂದುವರೆದಂತೆ, ಸಾಮಾಜಿಕ ತಾರತಮ್ಯಗಳ ಕುರಿತು ಅವರು ಸಮಾಜವಾದಿಗಳಿಗೆ ಹೇಳಿರುವ ಸ್ಪಷ್ಟ ನುಡಿಗಳು ಇಂತಿವೆ. "ಉಚ್ಚ–ನೀಚ, ಸ್ಪರ್ಶ–ಅಸ್ಪರ್ಶ ಮೊದಲಾದ ಭೇದಗಳನ್ನು ಪಾಲಿಸುತ್ತಾ ಬಂದಿರುವ ಜನರ ಸಮಸ್ಯೆಗಳನ್ನು ಬಗೆಹರಿಸದೆ ಸಮಾಜವಾದ ಭಾರತದಲ್ಲಿ ಒಂದು ಸೆಕೆಂಡಿನಷ್ಟು ಕಾಲ ಆಡಳಿತ ನಡೆಸಲಾರದು. ಬಣ್ಣದ ಮಾತನಾಡುವುದರಲ್ಲಿಯೇ ತೃಪ್ತಿ ಪಡದೆ, ಸಮಾಜವಾದ ವಸ್ತುಶಃ ಕಾರ್ಯರೂಪದಲ್ಲಿ ಬರಬೇಕೆಂದು ಸಮಾಜವಾದಿಗಳು ಬಯಸುವುದಾದರೆ, ಸಮಾಜ ಸುಧಾರಣೆಯ ಸಮಸ್ಯೆಯನ್ನು ಸಮಾಜವಾದಿ ಬಿಡಿಸಲೇಬೇಕಾಗುತ್ತದೆ."[4]

ಅಂಬೇಡ್ಕರ್ ಅವರೇ ಭಾರತೀಯ ಸಮಾಜದಲ್ಲಿ ಧರ್ಮದ ಸ್ಥಾನವನ್ನು ವಿಶ್ಲೇಷಿಸುತ್ತಾರೆ. ಅವರ ಸಮಾಜವಾದ ಧರ್ಮ ಸಹಿತವಾದುದು. ಆ ಮಾತುಗಳು ಹೀಗಿವೆ. "ಧರ್ಮವೆಂಬುದು ಶಕ್ತಿ ಮೂಲವೆಂದು ಭಾರತದಲ್ಲಿ ಇತಿಹಾಸ ನಿರ್ದೇಶಿಸುತ್ತದೆ. ಯಾವ ನ್ಯಾಯಾಧೀಶನಗಿಂತಲೂ ಹೆಚ್ಚಿನ ಅಧಿಕಾರವನ್ನು ಧರ್ಮಗುರು ಜನಸಾಮಾನ್ಯರ ಮೇಲೆ ಚಲಾಯಿಸುತ್ತಾನೆ. ಮುಷ್ಕರಗಳು ಚುನಾವಣೆಗಳಂತಹ ವಿಷಯಗಳು ಕೂಡ ಧಾರ್ಮಿಕ ಅಂಶಗಳಾಗಿ ಪರಿವರ್ತನೆ ಹೊಂದುತ್ತವೆ."[5] ವಿಧಿ ನಿಷೇಧಗಳ ಧರ್ಮವನ್ನು ಅವರು ಖಂಡಿಸುತ್ತಾರೆ. ಆದರೆ ಬರ್ಕ್ ಎಂಬುವನು ಹೇಳಿರುವ ಮಾತಾದ 'ನಿಜವಾದ ಧರ್ಮವು ಸಮಾಜಕ್ಕೆ ಆಧಾರವಾಗಿರುತ್ತದೆ. ನಿಜವಾದ ನಾಗರಿಕ ಸರ್ಕಾರಕ್ಕೂ ಅದೇ ಅಡಿಗಲ್ಲು.' ಎಂಬ ಮಾತನ್ನು ಅವರು ಒಪ್ಪುತ್ತಾರೆ. ವಿಧಿನಿಷೇಧಗಳ ಜಾಗದಲ್ಲಿ ಧರ್ಮ ಇರಬೇಕು ಎಂಬುದು ಅಂಬೇಡ್ಕರ್ ಅವರ ಅಭಿಮತ. ಅವರು ನಿರೂಪಿಸುವ ಸುಧಾರಿತ ಧರ್ಮದಲ್ಲಿ ಐದು ಸೂತ್ರಗಳಿವೆ. ಅವೇ ಅದರಲ್ಲಿ ಪ್ರಧಾನವಾಗಬೇಕೆಂದು ಅಂಬೇಡ್ಕರ್ ಸೂಚಿಸುತ್ತಾರೆ. ಅವುಗಳೆಂದರೆ, 1. ಏಕ ಧರ್ಮಗ್ರಂಥ, 2. ಪೌರೋಹಿತ್ಯದ ನಿಷೇಧ. ಇದು ಅಸಾಧ್ಯವಾದರೆ ಅನುವಂಶೀಯ ಪೌರೋಹಿತ್ಯ ನಿಷೇಧ. 3. ಧರ್ಮಾಧಿಪತಿ ಸರ್ಕಾರದ ಸೇವಕನಾಗಿರಬೇಕು. ಪ್ರವೇಶ ಪರೀಕ್ಷೆ ಮೂಲಕ ಧರ್ಮಾಧಿಕಾರಿ ಆಯ್ಕೆಯಾಗಬೇಕು. ಅವನು ಕಾನೂನುಗಳಿಗೆ ಬದ್ಧನಾಗಿರಬೇಕು. 4. ಐ.ಸಿ.ಎಸ್ ಅಧಿಕಾರಿಗಳಂತೆಯೇ ಪೌರೋಹಿತ್ಯರ ಸಂಖ್ಯೆಯನ್ನು ನಿಯಂತ್ರಿಸಬೇಕು. ಎಂದು ಸ್ಪಷ್ಟ ಪರಿಕಲ್ಪನೆ ಒದಗಿಸಿದ್ದಾರೆ.

**ಗಾಂಧಿವಾದದ ವಿಮರ್ಶೆ:** ಅಂಬೇಡ್ಕರರು ಗಾಂಧಿಯವರ ಸಾಮಾಜಿಕ ಧೋರಣೆಗಳಲ್ಲಿನ ದೋಷಗಳನ್ನು ಗುರುತಿಸಿದರು. ಆದರೆ ಗಾಂಧಿಯವರ ಟೀಕೆಯಲ್ಲಿ ರಾಜಕೀಯ ಆಯಾಮ ಸಹ ಇದೆ. ಗಾಂಧೀಜಿಯವರ 'ಜಾತಿ ಪ್ರೀತಿ' ಮತ್ತು 'ಜಾತಿ ನಿಲುವು' ಕುರಿತ ಧೋರಣೆಗಳನ್ನು ಕಟು ಶಬ್ಧಗಳಲ್ಲಿಯೇ ಟೀಕಿಸಿದ್ದಾರೆ. ಕಾಲಕಾಲಕ್ಕೆ ಅಂಬೇಡ್ಕರ್ ಅವರು ಗಾಂಧೀಜಿಯವರ ಹಲವು

ಸಾಮಾಜಿಕ ಕಾರ್ಯಕ್ರಮಗಳ ಸೈದ್ಧಾಂತಿಕ ವಿಮರ್ಶೆ ಮಾಡಿದ್ದಾರೆ. ಗಾಂಧೀಜಿಯವರ ಗ್ರಾಮ ಸ್ವರಾಜ್ಯ, ಚರಕ ಬಳಕೆ, ದೈಹಿಕ ಶ್ರಮದ ಬದುಕು ಮುಂತಾದ ಯಂತ್ರರಹಿತ ನಾಗರಿಕತೆಯನ್ನು ಅವರು ವಿರೋಧಿಸಿದ್ದಾರೆ. ಇಲ್ಲೆಲ್ಲಾ ಅವರು ಕ್ರಾಂತಿಕಾರಿ ಅರ್ಥಶಾಸ್ತ್ರಜ್ಞನ ರೀತಿಯಲ್ಲಿ ಆಲೋಚಿಸಿದ್ದಾರೆ. ಆಧುನಿಕ ನಾಗರಿಕತೆಯ ಪ್ರಬಲ ಪ್ರತಿಪಾದಕರಂತೆ ಅವರು ಚರ್ಚಿಸುತ್ತಾರೆ. ಬೃಹತ್ ಕೈಗಾರಿಕೆ, ನಗರೀಕರಣಗಳಿಂದ ಸಾಮಾಜಿಕ ಸುಧಾರಣೆಗಳಿಗೆ ಕಾರಣವಾಗುವುದರ ಬಗ್ಗೆ ಅವರು ನಂಬಿಕೆ ವ್ಯಕ್ತಪಡಿಸುತ್ತಾರೆ. 'ಗಾಂಧೀವಾದ' ಕುರಿತ ಅವರ ಲೇಖನದಲ್ಲಿ 'ಹಿಂದ್ ಸ್ವರಾಜ್' ಕೃತಿಯ ಪ್ರತಿಗಾಮಿ ಚಿಂತನೆಗಳನ್ನು ಸಾಕಷ್ಟು ಟೀಕೆ ಮಾಡುತ್ತಾರೆ. ಗಾಂಧಿಯವರ ಹಲವು ಅಭಿವೃದ್ಧಿ ಚಿಂತನೆಗಳನ್ನು ಉದಾಹರಣೆ ಸಮೇತ ದೋಷಗಳನ್ನು ಎತ್ತಿ ತೋರಿಸುತ್ತಾರೆ. ಆದರೆ ಗಾಂಧಿಯವರ ಅಹಿಂಸೆಯ ಮಾರ್ಗವನ್ನು ಅವರು ಒಪ್ಪುತ್ತಾರೆ.

**ಕಾರ್ಲ್‌ಮಾರ್ಕ್ಸ್ ಅವರ ಕಮ್ಯುನಿಸಂನ ವಿಮರ್ಶೆ:** ಕಾರ್ಲ್‌ಮಾರ್ಕ್ಸ್‌ನ ಕಮ್ಯುನಿಸಂನ ವಿಮರ್ಶೆಯು ಬಾಬಾ ಸಾಹೇಬ ಅಂಬೇಡ್ಕರರ ಎರಡು ಲೇಖನಗಳಲ್ಲಿ ಅಡಕಗೊಂಡಿದೆ. ಇದು ಬುದ್ಧನ ಸಮಾಜವಾದದೊಂದಿಗೆ ಮಾಡಿರುವ ತೌಲನಿಕ ಅಧ್ಯಯನವಾಗಿದೆ. ಇದರಲ್ಲಿ ಮೊದಲಿಗೆ ಕಾರ್ಲ್‌ಮಾರ್ಕ್ಸ್‌ನ ಸಮಾಜವಾದದ ಅಧ್ಯಯನವಿದೆ. ಭಾರತದ ಮೊದಲ ಸಮಾಜವಾದಿಯಾಗಿರುವ ಬುದ್ಧನ ಸಮಾಜವಾದದ ಅಧ್ಯಯನ ಚರ್ಚೆ ಇದೆ. ನಂತರ ಅಂಬೇಡ್ಕರರು ಇವೆರಡರ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುತ್ತಾರೆ. ಮುಂದುವರೆದು ಮಾರ್ಕ್ಸ್‌ನ ವಾದವನ್ನು ತಿರಸ್ಕರಿಸಿ ಬುದ್ಧನ ವಾದಗಳನ್ನು ಒಪ್ಪುತ್ತಾರೆ. ಅದರಂತೆಯೇ ತಮ್ಮ ಕೊನೆಯ ದಿನಗಳನ್ನು ಬೌದ್ಧರಾಗಿ ಕಾಲ ಕಳೆಯುತ್ತಾರೆ. ಈ ಲೇಖನದ ಕೊನೆಯ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. "..ಕಮ್ಯುನಿಸಂ ತತ್ವ ಕೂಡ ಮನುಷ್ಯರು ಹಂದಿಗಳಿಗಿಂತ ಹೆಚ್ಚಲ್ಲ ಎಂದು ಮನುಷ್ಯರನ್ನು ಹಂದಿಗಳಂತೆ ಕೊಬ್ಬಿಸುವುದೇ ಆಗಿದೆ. ಮನುಷ್ಯ ಭೌತಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಬೆಳೆಯಲೇ ಬೇಕು. ಸಮಾಜ ಹೊಸ ಅಸ್ತಿಭಾರವನ್ನು ಹಾಕಲು ಉದ್ದೇಶಿಸಿದೆ ಎಂಬುದು ಫ್ರಾನ್ಸಿನ ಮಹಾಕ್ರಾಂತಿಯ ಸಹೋದರತ್ವ, ಸ್ವಾತಂತ್ರ್ಯ, ಸಮಾನತೆ ಎಂಬ ಈ ಮೂರು ಮಂತ್ರಗಳಲ್ಲಿ ಅಡಕವಾಗಿದೆ. ಈ ಘೋಷಣೆಯಿಂದಾಗಿಯೇ ಫ್ರಾನ್ಸಿನ ಕ್ರಾಂತಿಗೆ ಸ್ವಾಗತ ಸಿಕ್ಕಿತು. ಆದರೆ ಸ್ವಾತಂತ್ರ್ಯವನ್ನು ತರಲು ಅದು ಸೋತಿತು. ಸಮಾನತೆಯನ್ನು ತರಲು ರಷ್ಯಾದ ಕ್ರಾಂತಿ ಉದ್ದೇಶಿಸಿರುವುದರಿಂದ ನಾವು ಅದನ್ನು ಸ್ವಾಗತಿಸುತ್ತೇವೆ. ಆದರೆ ಸಮಾನತೆಯ ಸ್ಥಾಪನೆಗಾಗಿ ಸಮಾಜವು ಸೋದರತ್ವ ಅಥವಾ ಸ್ವಾತಂತ್ರ್ಯವನ್ನು ಬಲಿಕೊಡಲಾಗುವುದಿಲ್ಲ. ಈ ಕಾರಣದಿಂದಾಗಿ ಸಮಾನತೆಗೆ ವಿಪರೀತ ಒತ್ತು ಕೊಡಬಾರದು. ಸೋದರತ್ವ ಅಥವಾ ಸ್ವಾತಂತ್ರ್ಯ ಇಲ್ಲದಿದ್ದರೆ ಸಮಾನತೆಗೆ ಬೆಲೆ ಇಲ್ಲ. ಬುದ್ಧನ ಮಾರ್ಗವನ್ನು ಅನುಸರಿಸುವುದರಿಂದ ಮಾತ್ರ ಈ ಮೂರು ತತ್ವಗಳು ಜೊತೆಜೊತೆಯಾಗಿ ಬಾಳಬಲ್ಲವು. ಕಮ್ಯುನಿಸಂ ಯಾವುದಾದರೂ ಒಂದನ್ನು ಕೊಡುತ್ತದೆ. ಎಲ್ಲವನ್ನೂ ಅಲ್ಲ."[6] ಈ ಮಾತುಗಳ ಮೂಲಕ ಅವರು ವೈಜ್ಞಾನಿಕ ಸಮಾಜವಾದದ ಅನ್ವಯಿಕೆಯನ್ನು ವಿರೋಧಿಸಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಇಲ್ಲಿನ ಮಾತುಗಳು ಅವರ ಬದುಕಿನ ನಡೆಯಲ್ಲೂ ಪ್ರತಿಫಲಿಸಿರುವುದನ್ನು ಗುರುತಿಸಬಹುದು.

**ಬುದ್ಧನ ಸಮಾಜವಾದದ ಸಮರ್ಥನೆ:** ಅಂಬೇಡ್ಕರ್ ಅವರ ಪ್ರಕಾರ ವಿಶ್ವದ ಮೊದಲ ಸಮಾಜವಾದಿ ಗೌತಮ ಬುದ್ಧ. 'ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್' ಎಂಬ ಅವರ ಪ್ರಸಿದ್ಧ ಲೇಖನದಲ್ಲಿ, ಕಾರ್ಲ್‌ಮಾರ್ಕ್ಸ್‌ನು ತನ್ನ ಸಮಾಜವಾದಿ ಸಿದ್ಧಾಂತ ನಿರೂಪಿಸುವ ಸಾವಿರಾರು ವರ್ಷಗಳ ಹಿಂದೆಯೆ ಗೌತಮ ಬುದ್ಧ ಅದನ್ನು ತಿಳಿಸಿದ್ದರ ಬಗ್ಗೆ ಚರ್ಚಿಸಿದ್ದಾರೆ. ಇವರಿಬ್ಬರ ನಡುವಣ ವ್ಯತ್ಯಾಸ ಎರಡು ಸಾವಿರದ ಮುನ್ನೂರ ಎಂಭತ್ತೊಂದು ವರ್ಷ ಎಂದು ಬಾಬಾ ಸಾಹೇಬ್ ಗುರುತಿಸುತ್ತಾರೆ. ತ್ರಿಪಿಟಕಗಳನ್ನು ಸ್ವತಃ ಓದಿ ಅರ್ಥೈಸಿಕೊಂಡು ಬುದ್ಧನ ಇಪ್ಪತ್ತೈದು ತತ್ವಗಳನ್ನು ಸಂಕ್ಷಿಪ್ತವಾಗಿ ಪಟ್ಟಿಮಾಡುತ್ತಾರೆ. ಮುಂದುವರೆದು ಕಾರ್ಲ್‌ಮಾರ್ಕ್ಸ್‌ನ ಮೂಲ ಸಿದ್ಧಾಂತವನ್ನು ಅಧ್ಯಯನ ಮಾಡಿ ಹತ್ತು ಅಂಶಗಳ ಸಾರಾಂಶ ರೂಪದಲ್ಲಿ ನಮ್ಮ ಮುಂದಿಡುತ್ತಾರೆ.

ಬಾಬಾ ಸಾಹೇಬರ ಅಧ್ಯಯನ ಕ್ರಮ ಮತ್ತು ಮಂಡನೆ ತರ್ಕಬದ್ಧವಾದ ರೀತಿಯದು. ನಿಖರತೆ ಇಲ್ಲಿನ ಮೂಲ ಗುಣ. ಸಮಜವಾದದ ಚರ್ಚೆಯಲ್ಲೂ ಇದು ಸಹಜವಾಗಿದೆ. ಉದಾಹರಣೆಗೆ 'ಕಾರ್ಲ್‌ಮಾರ್ಕ್ಸ್ ಸಿದ್ಧಾಂತದಲ್ಲಿ

ಜೀವಂತವಾಗಿರುವುದೇನು?' ಎಂದು ಪ್ರಶ್ನಿಸುತ್ತಲೇ ಕೇವಲ ನಾಲ್ಕು ಅಂಶಗಳ ಸಾರಾಂಶವನ್ನು ನಮ್ಮ ಮುಂದೆ ಚರ್ಚೆಗೆ ತರುತ್ತಾರೆ. ಅವುಗಳೆಂದರೆ,

1. ತತ್ವಜ್ಞಾನದ ಕೆಲಸ ಪ್ರಪಂಚವನ್ನು ಪುನರ್ ರಚಿಸುವುದು. ಪ್ರಪಂಚದ ಮೂಲವನ್ನು ಕುರಿತು ವಿವರಿಸುವುದರಲ್ಲಿ ಕಾಲಹರಣ ಮಾಡುವುದಲ್ಲ.

2. ವರ್ಗ–ವರ್ಗದ ನಡುವೆ ಹಿತಾಸಕ್ತಿಗಳ ಸಂಘರ್ಷವಿದೆ.

3. ಆಸ್ತಿಯ ಖಾಸಗಿ ಒಡೆತನ ಒಂದು ವರ್ಗಕ್ಕೆ ಅಧಿಕಾರವನ್ನೂ ಇನ್ನೊಂದು ವರ್ಗಕ್ಕೆ ದುಃಖವನ್ನೂ ಶೋಷಣೆಯ ಮೂಲಕ ತರುತ್ತದೆ.

4. ಸಮಾಜದ ಒಳಿತಿಗಾಗಿ ದುಃಖವನ್ನು ನಿರ್ಮೂಲ ಮಾಡಲು ಖಾಸಗಿ ಆಸ್ತಿಯನ್ನು ತೊಡೆದು ಹಾಕಬೇಕು.[7]

ಬಾಬಾ ಸಾಹೇಬರು ಇದೇ ಲೇಖನದಲ್ಲಿ ಮುಂದುವರೆದು, ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್‌ರ ಹೋಲಿಕೆಯನ್ನು ಸಹ ಮಾಡುತ್ತಾರೆ. ಬಹಳ ಸೂಕ್ಷ್ಮವಾದ ಜಟಿಲವಾಗಿರುವಂತೆ ಕಾಣುವ ಈ ಚರ್ಚೆಯಲ್ಲಿ ಅಹಿಂಸೆಯ ಪ್ರತಿಪಾದಕನಾದ ಬುದ್ಧನನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಹಿಂಸೆಗೆ ಅವಕಾಶ ನೀಡುವ ಕಾರ್ಲ್‌ಮಾರ್ಕ್ಸ್‌ನನ್ನು ತಿರಸ್ಕರಿಸುತ್ತಾರೆ. ಅಂಬೇಡ್ಕರರ ಈ ಮಾತಿನಿಂದ ನಮಗೆ ಅವರ ಕಮ್ಯುನಿಸಂನ ಸ್ವೀಕಾರ ಮತ್ತು ತಿರಸ್ಕಾರದ ಬಗ್ಗೆ ಸ್ಪಷ್ಟ ಚಿತ್ರ ದೊರಕುತ್ತದೆ.

ಬುದ್ದನು ರಾಜ್ಯದಲ್ಲಿ ಸಾಮ್ಯವಾದ ಸ್ಥಾಪಿಸಲು ಮೂರು ಮಾರ್ಗಗಳನ್ನು ಸೂಚಿಸುತ್ತಾನೆ. ಅವನ್ನು ಅಂಬೇಡ್ಕರ್ ಸಾವಧಾನವಾಗಿ ಮತ್ತು ಸಂಕ್ಷಿಪ್ತವಾಗಿ ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ, 1. ಪಂಚಶೀಲಗಳ ಆಚರಣೆ 2. ಅಷ್ಟಾಂಗ ಮಾರ್ಗಗಳು 3. ನಿರ್ವಾಣ ತತ್ವ. ಈ ಮಾರ್ಗಗಳಿಗೆ ಪೂರಕವಾಗಿ ಬಾಬಾ ಸಾಹೇಬರು ತ್ರಿಪಟಿಕದ ಆಯ್ದ ರಾಜ್ಯ ವ್ಯವಸ್ಥೆ, ಆಡಳಿತ ವ್ಯವಸ್ಥೆ ಮತ್ತು ಅದರ ಮುಂದುವರಿಕೆಗಳನ್ನು ವಿವರಿಸುತ್ತಾರೆ. ಇವು ಬಾಬಾ ಸಾಹೇಬರು ಒಪ್ಪುವ ಸಮಾಜವಾದದ ಮಾದರಿಯೆನಿಸುತ್ತವೆ.

**ಸಂವಿಧಾನಾತ್ಮಕ ಕ್ರಮಗಳು:** ಸಂವಿಧಾನದ ಅಡಿಯಲ್ಲಿ ಹಲವು ಸಮಾಜವಾದಿ ಕಾರ್ಯಕ್ರಮಗಳಿಗೆ ಬಾಬಾ ಸಾಹೇಬರು ಕಾರಣರಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆ, ಅಸ್ಪೃಶ್ಯತೆ ನಿವಾರಣೆ, ಮೀಸಲಾತಿ ಉಪಕ್ರಮಗಳು, ಹಿಂದುಳಿದವರ ಕಲ್ಯಾಣ ಕಾರ್ಯಕ್ರಮಗಳು, ಅಲ್ಪ ಸಂಖ್ಯಾತರ ಹಕ್ಕುಗಳು, ಮತದಾನದ ಹಕ್ಕು, ಸ್ವತಂತ್ರ ನ್ಯಾಯಾಂಗ, ಇತ್ಯಾದಿ. ಇಲ್ಲೆಲ್ಲಾ ಸಮಾಜವಾದಿ ದೇಶವೊಂದು ದೀರ್ಘಕಾಲ ಬಾಳಲು, ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಗಳಿಗೆ ಮನ್ನಣೆ ನೀಡಿದಂತಿದೆ. ಈ ಮೂರು ಮೌಲ್ಯಗಳು ಫ್ರಾನ್ಸ್ ಕ್ರಾಂತಿಯ ಫಲಶೃತಿಗಳು. ಇವನ್ನು ಬಹುವಾಗಿ ಮೆಚ್ಚಿದ್ದ ಬಾಬಾ ಸಾಹೇಬರು ಅವುಗಳ ಅನ್ವಯಿಕೆಗಳನ್ನು ಸಂವಿಧಾನದ ವಿವಿಧ ಕಲಂಗಳಲ್ಲಿ ಅಡಕಗೊಳಿಸುವುದನ್ನು ಸುಲಭವಾಗಿ ಗುರುತಿಸಬಹುದು. ಹಲವು ವಿಶ್ಲೇಷಕರು ಸಹ ಇದರ ಬಗ್ಗೆ ಹಲವೆಡೆ ಚರ್ಚಿಸಿದ್ದಾರೆ.

**ಉಪಸಂಹಾರ:** ಒಟ್ಟಿನಲ್ಲಿ ಬಾಬಾ ಸಾಹೇಬ ಅಂಬೇಡ್ಕರ್ ಅವರ ಸಮಾಜವಾದ ಜಾತಿರಹಿತ ಮತ್ತು ಧರ್ಮಸಹಿತವಾದುದು. ಇದು ಗಾಂಧೀಜಿ ಮತ್ತು ಕಾರ್ಲ್‌ಮಾರ್ಕ್ಸ್‌ರನ್ನು ಟೀಕಿಸಿದೆ. ಅವರ ಉತ್ತಮಾಂಶಗಳನ್ನು ಸ್ವೀಕರಿಸಿದೆ. ಬುದ್ಧ ಮತ್ತು ಫ್ರಾನ್ಸ್ ಕ್ರಾಂತಿಯ ಆಶಯಗಳನ್ನು ಮಾದರಿಯಾಗಿಟ್ಟುಕೊಂಡಿದೆ. ಸಂವಿಧಾನದ ಮೂಲಕ ಕಾರ್ಯರೂಪಕ್ಕಿಳಿಯಲು ಪ್ರಯತ್ನಿಸಿದೆ. ಜೊತೆಗೆ ಅಳವಡಿಕೆಗೆ ಯೋಗ್ಯವಾದ ವಾಸ್ತವಕ್ಕೆ ಹತ್ತಿರವಾದ ಭಾರತೀಯ ಸಿದ್ಧಾಂತವೆನಿಸುತ್ತದೆ.

**ಅಡಿ ಟಿಪ್ಪಣಿಗಳು;**

1. ಜಾತಿ–ಅದರ ಸ್ವರೂಪ. ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಗಳು. ಕುವೆಂಪು ಭಾಷಾ ಭಾರತಿ. ಸಂ; ಎಚ್.ದಂಡಪ್ಪ ಪುಟ–57
2. ಜಾತಿ–ಅದರ ಸ್ವರೂಪ. ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಗಳು. ಕುವೆಂಪು ಭಾಷಾ ಭಾರತಿ. ಸಂ; ಎಚ್.ದಂಡಪ್ಪ ಪುಟ–54
3. ಜಾತಿ–ಅದರ ಸ್ವರೂಪ. ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಗಳು. ಕುವೆಂಪು ಭಾಷಾ ಭಾರತಿ. ಸಂ; ಎಚ್.ದಂಡಪ್ಪ ಪುಟ–53
4. ಜಾತಿ–ಅದರ ಸ್ವರೂಪ. ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಗಳು. ಕುವೆಂಪು ಭಾಷಾ ಭಾರತಿ. ಸಂ; ಎಚ್.ದಂಡಪ್ಪ ಪುಟ–55
5. ಜಾತಿ–ಅದರ ಸ್ವರೂಪ. ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಗಳು. ಕುವೆಂಪು ಭಾಷಾ ಭಾರತಿ. ಸಂ; ಎಚ್.ದಂಡಪ್ಪ ಪುಟ–54
6. ಸಮಾಜವಾದ ವಾಚಿಕೆ. ಸಂ.ರಾಜರಾಮ ತೋಳ್ಪಾಡಿ ಮತ್ತು ನಯನ. ಕುವೆಂಪು ಭಾಷಾ ಭಾರತಿ. ಪುಟ–220
7. ಸಮಾಜವಾದ ವಾಚಿಕೆ. ಸಂ.ರಾಜರಾಮ ತೋಳ್ಪಾಡಿ ಮತ್ತು ನಯನ. ಕುವೆಂಪು ಭಾಷಾ ಭಾರತಿ. ಪುಟ–197